**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.448/2023**

**CW -8 PW-7**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ನಾಗರಾಜ |
| ತಂದೆ | ಃ | ಬಸ್ಸಪ್ಪ |
| ವಯಸ್ಸು | ಃ | 33 |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಗಣೇಕಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | **19-02-2026** |

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ಚಾಸಾ-1 ರಿಂದ 4 ರವರು ಸಂಬಂಧಿಕರು, ಚಾಸಾ-5 ಪರಿಚಯ ಇರುತ್ತಾರೆ. ಚಾಸಾ-6 ನನ್ನ ಸಹೊದರಿ, ಚಾಸಾ-7 ನನ್ನ ತಾಯಿ, 1 ನೇ ಆರೋಪಿ ನನ್ನ ಹೆಂಡತಿ, 2 ರಿಂದ 4 ನೇ ಆರೋಪಿತರು ಸಂಬಂಧಿಕರು. ದಿ. 03-03-2022 ರಂದು ಬೆಳಿಗ್ಗ 09-00 ರಿಂದ 09-30 ರ ಸುಮಾರಿಗೆ ನಾನು, ನನ್ನ ತಮ್ಮ, ಅಕ್ಕ ಮತ್ತು ತಾಯಿ, ಮಾವಂದಿರು ಎಲ್ಲರು ಮನೆಯಲ್ಲಿ ಇದ್ದೇವು. ನಾನು ಹಾಲನಲ್ಲಿ ಕುಳಿತಿದ್ದಾಗ ಹಿಂಬದಿ ಬಾಗಿಲಿನಿಂದ 2 ನೇ ಆರೋಪಿ ಮಲ್ಲಿಕಾರ್ಜುನ ಬಂದು ಚಪ್ಪಲಿಯಿಂದ ನನ್ನ ತಲೆಗೆ ಹೊಡೆದಿದ್ದು, ನಾನು ತೀರಿಗಿ ನೋಡಿದಾಗ ಪುನ: ಮಲ್ಲಿಕಾರ್ಜುನ ನನ್ನ ದೇಹದ ತುಂಬೆಲ್ಲಾ ಚಪ್ಪಲಿಯಿಂದ ಹೊಡೆದಿರುತ್ತಾನೆ. ಆಗ ನನ್ನ ತಾಯಿ ಬಿಡಿಸಲು ಬಂದಾಗ 1 ಮತ್ತು 3 ನೇ ಆರೋಪಿತರು ನನ್ನ ತಾಯಿಯ ಕೂದಲು ಹಿಡಿದು ಎಳೆದಾಡಿರುತ್ತಾರೆ. ಆಗ ಜನರು ಬಂದು ಬಿಡಿಸಿರುತ್ತಾರೆ. ಆರೋಪಿತರು ಆಗ ಉಳಿದುಕೊಂಡಿದ್ದಿ ನನ್ನ ಸೋದರ ಮಾವ ವಕೀಲನಾಗಿದ್ದು ನಿನನ್ನು ಬಿಡುವುದಿಲ್ಲ ಎಂದು ಜೀವ ಬೇದರಿಕೆ ಹಾಕಿರುತ್ತಾರೆ. ಆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ದೂರು ನೀಡಿದ ಮರುದಿನ ಸಂಜೆ 05-00 ಗಂಟೆಗೆ ಪೊಲೀಸರು ಘಟನಾ ಸ್ಥಳದಲ್ಲಿ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಾಡಿ, 1 ಚಪ್ಪಲಿಯನ್ನು ಜಪ್ತಿಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದೇ ಇರುವ ಚಪ್ಪಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ -1 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು:-</u> ಆರೋಪಿತರ ಪರ ಶ್ರೀ. ವಿ.ಡಿ.ಸಿ ವಕೀಲರಿಂದ.**

1 ನೇ ಆರೋಪಿಯೊಂದಿಗೆ ವಿವಾಹ ಆಗಿ, ಈಗ 11 ವರ್ಷ ಆಗಿರುತ್ತದೆ. ನನಗೆ ಓರ್ವ ಮಗನಿರುತ್ತಾನೆ. 1 ನೇ ಆರೋಪಿ ಮತ್ತು ನನ್ನ ತಾಯಿಯ ನಡುವಿನ ಸಣ್ಣ ಪುಟ್ಟ ಕೆಲಸಗಳ ವಿಚಾರವಾಗಿ ವೈಮನಸ್ಸು ಬಂದು 1 ನೇ ಆರೋಪಿ ತವರು ಮನೆಗೆ ಹೋಗಿರುತ್ತಾಳೆ. ಸಂಬಂಧಿಕರ ಮದುವೆಗೆಂದು ನನ್ನ 1 ನೇ ಆರೋಪಿ ತವರು ಮನೆಗೆ ಹೋಗಿದ್ದು ಪುನ: ನಮ್ಮ ಮನೆಗೆ ಬಂದಿರುವುದಿಲ್ಲ. ನಾವು ಬೆಂಗಳೂರಿನಲ್ಲಿ ವಾಸವಿರುತ್ತೇವೆ ಅಂದರೆ ಸರಿ. ನಾನು ಬೆಂಗಳೂರಿನ ಬೆಸ್ಕಾಂನಲ್ಲಿ ಲೈನ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಮನೆಗೆ ಬರುವಂತೆ 1 ನೇ ಆರೋಪಿಯನ್ನು ಕೇಳಿರುತ್ತಿಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅನೇಕ ಬಾರಿ ಕೇಳಿದ್ದು ಆಗ 1 ನೇ ಆರೋಪಿ ತನಗೆ ಪ್ರಾಣ ಭಯ ಇದೆ ಎಂದು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿಗೆ ನಾವು ಬೆಂಗಳೂರಿನಲ್ಲಿ ಹೊಡೆ ಬಡೆ ಮಾಡಿದ್ದರಿಂದ ತವರು ಮನೆಗೆ ಹೋಗಿರುತ್ತಾರೆ ಅಂದರೆ ಸರಿಯಲ್ಲ. ಜೀವನಾಂಶಕ್ಕಾಗಿ ನನ್ನ ವಿರುದ್ಧ 1 ನೇ ಆರೋಪಿ ಅರ್ಜಿ ಸಲ್ಲಿಸಿದ್ದಳು ಅಂದರೆ ಸರಿ.

ಆರೋಪಿತರು ನಮ್ಮ ಮನೆಗೆ ಬಂದಾಗ ನಾನು ಹಾಲನಲ್ಲಿ ಕುಳಿತಿದ್ದು, ನನ್ನ ಅಕ್ಕ ಅಡುಗೆ ಮನೆಯಲ್ಲಿ ಇದ್ದು, ನನ್ನ ತಾಯಿ ನೀರು ಹಿಡಿಯುತ್ತಿದ್ದಳು. ಮೊದಲು ನನಗೆ 2 ನೇ ಆರೋಪಿ ನನ್ನ ಹಿಂದುಗಡೆಯಿಂದ ಬಂದು ಹೊಡೆದಿರುತ್ತಾನೆ. ಮಲ್ಲಿಕಾರ್ಜುನನೊಂದಿಗೆ 1 ಮತ್ತು 3 ನೇ ಆರೋಪಿ ಹಾಗೂ ಓರ್ವ ಚಿಕ್ಕ ಹುಡುಗ ಮತ್ತು ಇನ್ನೊಬ್ಬ ವ್ಯಕ್ತಿ ಇದ್ದು ಆತನ ಹೆಸರು ಗೊತ್ತಿಲ್ಲ. ಒಟ್ಟು 5 ಜನ ಬಂದಿದ್ದರು. 1 ನೇ ಆರೋಪಿ ನನ್ನ ಜೀವನಾಂಶಕ್ಕೆ ರೂ.50 ಸಾವಿರ ಹಣ ನೀಡುವಂತೆ ಕಿರುಚಾಡುತ್ತಿದ್ದಳು. ನನ್ನ ತಾಯಿಗೆ ಅಲ್ಪಸ್ವಲ್ಪ ನೋವಿನಿಂದ ಬಳಲುತ್ತಿದ್ದಳು. ಗಂಗಪ್ಪ, ಹೇಮಣ್ಣ ಮತ್ತು ನಾಗರಾಜ ಜಗಳ ಬಿಡಿಸಿರುತ್ತಾರೆ. ನಮ್ಮ ಮನೆಯ ಅಕ್ಕಪಕ್ಕ ಬೇರೆ ಮನೆಗಳು ಇವೆ ಅಂದರೆ ಸರಿ. 1 ನೇ ಆರೋಪಿ ಹಣ ಕೇಳಲು ಮನೆಗೆ ಬಂದಾಗ ಅವಳಿಗೆ ನಾವೇ ಮೊದಲು ಹೊಡೆದಿರುತ್ತೇವೆ ಅಂದರೆ ಸರಿಯಲ್ಲ. 1 ನೇ ಆರೋಪಿ ನಮ್ಮ ವಿರುದ್ಧ ಪ್ರಕರಣ ದಾಖಲಿಸಿರುತ್ತಾಳೆ ಅಂದರೆ ಸರಿ. 1 ನೇ ಆರೋಪಿ ದಾಖಲಿಸಿದ ಪ್ರಕರಣದಲ್ಲಿ ನಾನು 1 ನೇ ಆರೋಪಿಯಾಗಿದ್ದರಿಂದ

ಪೊಲೀಸರು ನನ್ನನ್ನು ಬಂದಿಸಬಹುದು ಎಂಬ ಹೇದರಿಕೆ ಹಿಂದ ನಾನು ಗ್ರಾಮದಲ್ಲಿ ಇದ್ದು ನನ್ನ ಮಾವ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಘಟನಾ ಸ್ಥಳದ ಪೂರ್ವಕ್ಕೆ ನಮ್ಮ ಸಂಬಂಧಿಕರ ಮನೆ, ಪಶ್ಚಿಮಕ್ಕೆ ಸಂಬಂಧಿಕರ ಮನೆ, ಉತ್ತರಕ್ಕೆ ಖಾಲಿಜಾಗ ಇತ್ತು, ದಕ್ಷಿಣಕ್ಕೆ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ಪೊಲೀಸರು ಮರು ದಿನ ಘಟನಾ ಸ್ಥಳಕ್ಕೆ ಬಂದಾಗ ಸಂಜೆ 05-30 ಆಗಿತ್ತು. ಸ್ಥಳದಲ್ಲಿ 01 ರಿಂದ 01 ವರೆ ತಾಸು ಪೊಲೀಸರು ಇದ್ದರು. ಆಗ ಸ್ಥಳದಲ್ಲಿ ಚಾಸಾ-2, 3, ನಾನು ಮತ್ತು ಅಕ್ಕಪಕ್ಕದ ಮನೆಯವರು ಇದ್ದರು. ಪಂಚನಾಮೆ ಕಾಲಕ್ಕೆ ಚಪ್ಪಲಿ ಎಲ್ಲಿ ಬಿದ್ದಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಘಟನಾ ಸ್ಥಳದಿಂದ ಅಂದಾಜು 10 ರಿಂದ 20 ಅಡಿ ಅಂತರದಲ್ಲಿ ನಾವೇ ಚಪ್ಪಲಿಯನ್ನು ತೆಗೆದು ಇಟ್ಟಿದ್ದೇವು. ಪಂಚನಾಮೆ ಕಾಲಕ್ಕೆ ಚಪ್ಪಲಿಯನ್ನು ಚಾಸಾ-1 ರವರು ನೀಡಿರುತ್ತಾರೆ.

1 ನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿದರೆ ಜೀವನಾಂಶ ಕೇಳುವುದಿಲ್ಲ ಎಂದು ನನ್ನ ಮಾವನ ವಿರುದ್ಧ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಮು.ಮಾ -1 ರಂತಾಹ ಚಪ್ಪಲಿಗಳು ಎಲ್ಲಾ ಕಡೆ ದೊರೆಯುತ್ತವೆ ಅಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರು ಆರೋಪಿತರ ವಿರುದ್ದ ಚಾಸಾ-1 ರವರ ಮೂಲಕ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 4 ನೇ ಆರೋಪಿ ಪ್ರಚೋದನೆಯಿಂದ ಆರೋಪಿತರು ಬಂದು ಹೊಡೆದಿರುತ್ತಾರೆ ಎಂದು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ.

**ಮರುವಿಚಾರಣೆ:-** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.